Misappropriation of Funds by V. P. Chairmen in Kudligi Taluk

751. Sri M. M. J. SADYOJATHA (Kudligi).—

Will the Minister for Development be pleased to state :—

(*a*) the number of Village Panchayat Chairmen in Kudligi taluk who have misappropriated Panchayat funds ;

(*b*) action taken by the Government to recover the amount ?

Sri B. L. GOWDA (Deputy Minister for Co-oparation).—

(*a*) Three Chairmen are reported to have misappropriated Panchayat funds.

(*b*) In one case, police have taken up investigation ; in another case surcharge proceedings have been instituted ; the third case is under enquiry by the Assistant Commissioner.

ಶ್ರೀ ಎಂ. ಎಂ. ಜೆ. ಸದ್ಯೋಜಾತ .—ಸ್ವಾಮಿ, ಯಾವ ಯಾವ ಪಂಚಾಯತಿ ಅಧ್ಯಕ್ಷರು ಎಷ್ಟೆಷ್ಟು ಹಣವನ್ನು ದುರುಪಯೋಗ ಮಾಡಿದ್ದಾರೆ ?

† ಶ್ರೀ ಬಿ. ಎಲ್. ಗೌಡ.—ಚಿರುಬ ಪಂಚಾಯಿತಿಯ ಅಧ್ಯಕ್ಷರು 4,388-56 ರೂಪಾಯಿ ಗಳನ್ನು ದರುಪಯೋಗ ಮಾಡಿದ್ದಾರೆ. ಅವರ ಮೇಲೆ ಪೋಲೀಸ್ ಕೇಸ್ ದಾಖಲು ಮಾಡಿದ್ದಾರೆ. ಪೋಲೀಸಿನವರು ತನಿಖೆ ನಡೆಸುತ್ತಿದ್ದಾರೆ. ರಾಮದುರ್ಗ ಪಂಚಾಯಿತಿಯ ಅಧ್ಯಕ್ಷರು 16,519-64 ರೂಪಾಯಿಗಳನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ಅಲ್ಲಿ ಅಸಿಸ್ಟೆಂಟ್ ಕಮೀಷನರು ಸರ್‌ಚಾರ್ಜ್ ಪ್ರೊಸೀಡಿಂಗ್ಸ್ ನಡೆಸುತ್ತಿದ್ದಾರೆ. ವರಳ ಹಳ್ಳಿ ಪಂಚಾಯಿತಿಯ ಪ್ರೇಮ್ಮನರು 2,538-00 ರೂಪಾಯಿಗಳನ್ನು ದುರುಪಯೋಗ ಮಾಡಿದ್ದಾರೆ. ಇದರ ಬಗ್ಗೆ ಅಸಿಸ್ಟೆಂಟ್ ಕಮೀಷನರು ಎನ್‌ಕ್ವೈರಿ ನಡೆಸುತ್ತಿದ್ದಾರೆ.

ಶ್ರೀ ಎಂ. ದೊಡ್ಡನಗೌಡ.—ಈ ಪಂಚಾಯಿತಿಗಳಲ್ಲಿ ಇಷ್ಟೊಂದು ಹಣ ದುರುಪಯೋಗವಾಗಿ ದ್ದರೂ ಕೂಡ, ಆ ಪಂಚಾಯಿತಿಯ ಅಧ್ಯಕ್ಷರುಗಳ ಮೇಲೆ ಕೇಸು ಹಾಕುತ್ತೇವೆ, ಸರ್‌ಚಾರ್ಜ್ ಪ್ರೊಸೀಡಿಂಗ್ಸ್ ನಡೆಯುತ್ತಿದೆ ಎಂದು ಹೇಳುತ್ತಿದ್ದೀರಿ, ಆ ಹಣ ದುರುಪಯೋಗವಾಗಿ 3-4 ವರ್ಷ ಗಳಾಗಿವೆ. ಇಲ್ಲಿಯವರೆಗೂ ಅವರ ಮೇಲೆ ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ ?

ಶ್ರೀ ಬಿ. ಎಲ್. ಗೌಡ.—ಎನ್‌ಕ್ವೈರಿ, ಸರ್‌ಚಾರ್ಜ್ ಪ್ರೊಸೀಡಿಂಗ್ಸ್ ನಡೆಯುತ್ತಿದೆ, ದುರು ಪಯೋಗವಾಗಿರುವದನ್ನು ವಸೂಲು ಮಾಡುವುದಕ್ಕೆ ಕ್ರಮ ಜರುಗಿಸುತ್ತಿದ್ದಾರೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಸರ್‌ಚಾರ್ಜ್ ಮಾಡುವುದು ಸರಿಯಾದ ಕ್ರಮವೇ ?

ಶ್ರೀ ಬಿ. ಎಲ್. ಗೌಡ.—ಅದಕ್ಕೆಂಕ್ವೈರಿ ಎನ್‌ಕ್ವೈರಿ ನಡೆಯುತ್ತಿದೆ.

ಶ್ರೀ ಬಿ. ಪಿ. ಗಂಗಾಧರ್.—ಸ್ವಾಮಿ ನಮ್ಮ ರಾಜ್ಯದಲ್ಲಿ ಸರ್ವೆ ಸಾಮಾನ್ಯವಾಗಿ ಎಲ್ಲಾ ಕಡೆಗಳಲ್ಲಿಯೂ ಏಸ್ ಅಪ್ರೋಪ್ರಿಯೇಷನ್ ನಡೆಯುತ್ತಿದೆ. ಆದ್ದರಿಂದ ಅಂಥಾ ಸಂದರ್ಭದಲ್ಲಿ ಪೋಲೀಸಿನವರಿಗೆ ಅರ್ಜಿ ಕೊಟ್ಟರೆ ಸಂಬಂಧಪಟ್ಟವರ ಮೇಲೆ ಆಕ್ಷನ್ ತೆಗೆದುಕೊಳ್ಳುವಂತೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಅರ್ಜಿಯನ್ನು ಕಳುಹಿಸಿದರೆ ಪೋಲೀಸಿನವರನ್ನು ಕಳಹಿಸಿ ಆಕ್ಷನ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೇವೆ.